ಹಿತ್ತಲ ಬಾಗಿಲಿನಲ್ಲಿ, ''ಚನ್ನಮಕ್ಕಾ ಒಸಿ ಸಾರೊ?...'' ಎಂದು ಕೀರಲು ದನಿಯೊಂದು ಕೇಳಿ ಬಂದಿತು.

''ಯಾರಮ್ಮಿ ಅದು?...'' ಚಿಕ್ಕಿಯ ದನಿ.

''ನಾನು ಸುಂದ್ರಿ ಕಣ್ಣಕ್ಕಾ, ಒನ್ನಮ್ಮನ ಎಣ್ಣು. ಒಸಿ ಸಾರು ಕೊಡಕ್ಕ!''

ಸುಂದ್ರಿಯನ್ನು ಇರಲು ಹೇಳಿ, ಅವಳಿಗೆ ಸಾರು ಕೊಟ್ಟು, ಹಿತ್ತಲ್ಲಿ ದನಗಳಿಗೆ ನೀರುನಿಡಿ ನೋಡ್ಕಂಬತ್ತೀನಿ ನೀನು ತಳಾರದಲ್ಲಿ ತಿನ್ನವ್ವಾ ಎಂದು ಚಿಕ್ಕಿ ಅಡಿಗೆಮನೆಗೆ ಹೋದಳು.

ಚಿಕ್ಕಿ ಕಲ್ಯಾಣಿಯ ತಾಯಿಗೆ ಚಿಕ್ಕಮ್ಮನ ಮಗಳು. ಹಾಗಾಗಿ ಕಲ್ಯಾಣಿಗೆ ಪ್ರೀತಿಯಲ್ಲಿ ಅವಳು ಯಾವ ಸ್ವಂತದವರಿಗಿಂತ ಮಿಗಿಲಾದವಳು.

ಕಲ್ಯಾಣಿ ತೊಟ್ಟಿಯ ಸುತ್ತಲೂ ಇದ್ದ ಚಿತ್ತಾರರದ ಕಂಬಗಳನ್ನು ನೋಡಲಾರಂಭಿಸಿದಳು. ಇಲ್ಲೇ ಅಲ್ಲವೇ ನಾನು, ತುಂಗಾ, ಗಂಗೂ, ನಿಂಗೂ ಜತೆ, "ಸಾರ್ ಉಪ್ಪಿನಕಾಯಿ" ಆಟ ಆಡ್ತಿದ್ದದ್ದು! ಕ್ಲೆಪ್ಸ್ ಹಾಕಿ ಒಬ್ಬರು ಕಳ್ಳ ಆದರೆ ಉಳಿದವರು ಒಂದೊಂದು ಕಂಬ ಹಿಡಿಯುತ್ತಿದ್ದೆವು. ಕಳ್ಳ ಆದವರು ತಲೆ ಮೇಲೆ ಕೈಯಿಟ್ಟು ಸಾರ್ ಉಪ್ಪಿನಕಾಯ್... ಸಾರ್ ಉಪ್ಪಿನಕಾಯ್ ಎಂದು ಕೂಗಿಕೊಂಡು ಓಡಾಡುತಿದ್ದಾಗ ಕಂಬ ಹಿಡಿದವರು ಕಂಬ ಬದಲಾಯಿಸಿಕೊಳ್ಳುತ್ತಿದ್ದೆವು. ಯಾರಾದರೊಬ್ಬರು ಕಂಬ ಹಿಡಿಯುವುದು ನಿಧಾನವಾದರೆ, ಕಳ್ಳ ಆಗಿದ್ದವರು ಆ ಕಂಬ ಹಿಡಿದುಬಿಟ್ಟರೆ, ಉಳಿದವರು ಕಳ್ಳ ಆಗಬೇಕಿತ್ತು; ಎಷ್ಟು ಮಜವಾಗಿರುತ್ತಿತ್ತು. ಅಕಸ್ಮಾತ್ ಮಾವ ಬರುವುದು ಗೊತ್ತಾದರೆ ಎಲ್ಲಾ ಗಪ್‌ಚಿಪ್!

ಇಂದು ನೀರವವಾಗಿರುವ ಕಂಬಗಳಿಂದ ಸುತ್ತುವರೆದ ಹಜಾರ, ಮಧ್ಯದ ತೊಟ್ಟಿಯನ್ನು ನೋಡಿದರೆ ಚಿಕ್ಕಿಯ ಮದುವೆಯ ಸಂಭ್ರಮ, ಸಡಗರಗಳು ವೀಳ್ಯ ಶಾಸ್ತ್ರದಿಂದ ಹಿಡಿದು ಮದುವೆವರೆಗಿನ ದೃಶ್ಯಗಳು ಈಗ ನಡೆದಂತೆ ಮನಸ್ಸಿನ ತೆರೆಯ ಮುಂದೆ ಬರುತ್ತಿವೆ.

ವೀಳ್ಯ ಶಾಸ್ತ್ರದ ದಿನ ಜರಿಸೀರೆ ಉಟ್ಟ ಚಿಕ್ಕಿ ಅವನತಮುಖಿಯಾಗಿ ಹಸೆಮಣೆ ಮೇಲೆ ಕುಳಿತಿದ್ದಾಳೆ. ಅವಳ ಮುಂದೆ ಭಾವೀಗಂಡನ ಮನೆಯವರು ತಂದ ಕೊಬ್ಬರಿ, ಬೆಲ್ಲ, ತೆಂಗಿನಕಾಯಿ, ಬಾಳೆಚಿಪ್ಪು, ಕಲ್ಲುಸಕ್ಕರೆ, ಬಾದಾಮಿ ತುಂಬಿದ ತಟ್ಟೆಗಳು, ಮೈಸೂರು ಮಲ್ಲಿಗೆ ರಾರಾಜಿಸುತ್ತಿವೆ. ಅತ್ತ ಹೆಣ್ಣು ಗಂಡು ಎರಡೂ ಕಡೆಯ ಮುಖ್ಯಸ್ಥರು ವೀಳ್ಯ ವಿನಿಮಯ ಮಾಡಿಕೊಳ್ಳುತ್ತಿದ್ದಾರೆ. ಹೆಂಗಸರು ಹಸೆಯೇರಿದ ಚಿಕ್ಕಿಗೆ ಕುಂಕಮ ಇಟ್ಟು, ಅಕ್ಕಿ ಇಕ್ಕಿ ಶಾಸ್ತ್ರ ಮಾಡುತ್ತಿದ್ದಾರೆ. ಹಣ್ಣು ಹಂಪಲುಗಳ ತಟ್ಟೆಗಳ ಹತ್ತಿರವೇ ಜಾಗ ಮಾಡಿಕೊಂಡು ಕುಳಿತಿರುವ ಚಿಳ್ಳೆಪಿಳ್ಳೆಗಳಿಗೆ ತಟ್ಟೆಯಲ್ಲಿರುವ ತಿಂಡಿಗಳದ್ದೇ ಚಿಂತೆ. ಹುಡುಗನ ಮನೆಯವರು ಚಿಕ್ಕಿಗೆ ಕಲಾಬತ್ತಿನ ದೊಡ್ಡ ಬಾರ್ಡರಿನ ಸೀರೆಯನ್ನೇ ತಂದಿದ್ದರು. ಎಲ್ಲಾ ಬಣ್ಣ ಬಣ್ಣ, ಘಮಘಮ ವಾತಾವರಣ. ಕೊನೆಗೆ ಎಲ್ಲರಿಗೂ ಕಡ್ಲೆಪುರಿ ಹಂಚಿದರು. ಹೆಂಗಸರು ನಾಜೂಕಾಗಿ ಕೊಂಚವೇ ಇಸಿದುಕೊಂಡರು; ಮಕ್ಕಳು ಬೊಗಸೆ ತುಂಬಾ ಕಡ್ಲೆಪುರಿ ಮುಕ್ಕಿದರು.

ಬೇಸಿಗೆ ರಜದಲ್ಲಿ ಕಲ್ಯಾಣಿ ಅಜ್ಜಿಯ ಊರಿಗೆ ರವಾನೆಯಾದಳು. ಈಗ ಅವಳಿಗೆ ಚಿಕ್ಕಜ್ಜಿ ಮನೆಯದ್ದೇ ಆಕರ್ಷಣೆ. ಚಿಕ್ಕಿಯ ಮದುವೆಯ ತಯಾರಿ ನಡೆದಿತ್ತಲ್ಲಾ! ಚಿಕ್ಕಿಗೆ ಒಡವೆ ಮಾಡಲು ವಾಜರದಾಸಪ್ಪ ಮನೆಗೇ ಬಂದು ಠಿಕಾಣಿ ಹೂಡಿದ್ದ. ಅವನ ಚಿನ್ನದ ಕೆಲಸದ ಪರಿಕರಗಳು ಕಲ್ಯಾಣಿಯ ಕುತೂಹಲಕ್ಕೆ ಮೂಲವಾಗಿದ್ದವು. ಇಕ್ಕಳ, ಚಿಮ್ಮಟ, ಒಂದು ಕುಂಡದಲ್ಲಿ ಕೆಂಡ, ನೀರು ಇತ್ಯಾದಿ. ಅವನು ಚಿನ್ನದ ಚೈನ್‌ಪೀಸುಗಳನ್ನು ಮಾಡಿ ಹಾಕುತ್ತಿದ್ದ! ಕೊನೆಗೆ ಚಿಕ್ಕಿಗೆ ಮೂರೆಳೆ ಚಿನ್ನದ ಸರ, ಬಳೆಗಳು, ವಾಲೆ, ಜುಮುಕಿ, ಉಂಗುರಗಳು ತಯಾರಾದವು. ಹೀಗೆ ಒಡವೆಗಳು ಮನೆಯಲ್ಲೇ ಮಾಯಾಬಜಾರಿನಂತೆ ತಯಾರಾಗುವುದನ್ನು ಕಲ್ಯಾಣಿ ಬಿಟ್ಟ ಕಣ್ಣು ಬಿಟ್ಟಂತೆ ಬೆರಗಿನಿಂದ ವೀಕ್ಷಿಸಿದಳು.

ಇನ್ನು ಹಪ್ಪಳ ತಯಾರಿ – ಹಪ್ಪಳಗಳನ್ನ ಒಣಗಿಸುವುದು ಹುಡುಗರಿಗೆ ಮೋಜಿನ ಆಟ. ಆ